# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1048
ಸದಸ್ಯರ ಹೆಸರು : ಶ್ರೀ ಪ್ರತಾಪ್ ಸಿಂಹ ನಾಯಕ್
(ವಿಧಾನ ಸಭೆಯಿಂದ ಚುನಾಯಯಿತರಾದವರು)
ಉತ್ತರಿಸುವ ದಿನಾಂಕ : 28.12.2022
ಉತ್ತರಿಸುವ ಸಚಿವರು : ಪಶುಸಂಗೋಪನೆ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾ ಪಶುಸಂಗೋಪನಾ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳು ಪ್ರಾರಂಭಗೊಂಡಿವೆಯೇ; | ಇಲ್ಲ. |
| ಆ) | ಪ್ರಾರಂಭಗೊಳ್ಳದಿದ್ದಲ್ಲಿ, ದೀರ್ಘಕಾಲಿಕ ವಿಳಂಬಕ್ಕೆ ಕಾರಣಗಳೇನು ಮತ್ತು ಯಾವ ಶೈಕ್ಷಣಿಕ ವರ್ಷದಿಂದ ಸದರಿ ಕಾಲೇಜಿನಲ್ಲಿ ತರಗತಿಗಳನ್ನು ಪ್ರಾರಂಭಿಸಲಾಗುವುದು; | ಕರ್ನಾಟಕ ಪಶುವೈದ್ಯಕೀಯ ಪಶು ಹಾಗೂ ಮೀನುಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬೀದರಿನ ಅಡಿಯಲ್ಲಿ ಬರುವ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕೊಯ್ಲಾ ಪಶುವೈದ್ಯಕೀಯ ಮಹಾವಿದ್ಯಾಲಯದ ಪ್ರಥಮ ಹಂತದ ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದೆ.<br><br>ಇದಕ್ಕನುಗುಣವಾಗಿ ಕರ್ನಾಟಕ ಗೃಹಮಂಡಳಿಯ ವತಿಯಿಂದ ಮೊದಲನೆ ಹಂತದಲ್ಲಿ ಮಹಾವಿದ್ಯಾಲಯದ ಕಾಲೇಜು ಕಟ್ಟಡ, ಆಸ್ಪತ್ರೆ, ವಿದ್ಯಾರ್ಥಿ ಮತ್ತು ವಿದ್ಯಾರ್ಥಿನಿಯರ ವಸತಿ ನಿಲಯ ಮತ್ತು ಅತಿಥಿ ಗೃಹದ ನಿರ್ಮಾಣಗಳನ್ನು ಕೈಗೊಳ್ಳಲಾಗಿದ್ದು ಅವುಗಳು ಮುಗಿಯುವ ಹಂತದಲ್ಲಿವೆ. ನೀರು ಸರಬರಾಜು, ವಿದ್ಯುತ್ ಸಂಪರ್ಕ ಹಾಗೂ ಒಳಚರಂಡಿ ಕಾಮಗಾರಿಗಳು ಪ್ರಗತಿಯಲ್ಲಿವೆ. ಎರಡನೇ ಹಂತದ ಕಾಮಗಾರಿಗಳಾದ ಒಳರಸ್ತೆ, ಕುಡಿಯುವ ನೀರಿನ ಯೋಜನೆ, ನೈರ್ಮಲೀಕರಣ ತೊಟ್ಟಿಗಳು, |

| | | |
|---|---|---|
| | | ಅಡ್ಡಗೋಡೆಗಳು, ಜಾನುವಾರು ಸಂಕೀರ್ಣಗಳು ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ. ಕಾಲೇಜನ್ನು ಪ್ರಾರಂಭ ಮಾಡಲು ಭಾರತೀಯ ಪಶುವೈದ್ಯಕೀಯ ಪರಿಷತ್ತು, ನವದೆಹಲಿ ಇದರ ಅನುಮೋದನೆ MSVE-2016 ರ ನಿಯಮಾವಳಿ ಪ್ರಕಾರ ಅಗತ್ಯವಿರುತ್ತದೆ.<br><br>ಕಾಲೇಜು ಪ್ರಾರಂಭ ಮಾಡಲು ಭಾರತೀಯ ಪಶುವೈದ್ಯಕೀಯ ಪರಿಷತ್ತು ಈ ಮೇಲೆ ತಿಳಿಸಿದ ಎಲ್ಲಾ ಕಟ್ಟಡಗಳ ಮೂಲಭೂತ ಸೌಕರ್ಯಗಳನ್ನು ಪೂರ್ಣಗೊಳಿಸುವುದು ಹಾಗೂ 91 ಬೋಧಕ ಮತ್ತು 173 ಬೋಧಕೇತರ ಸಿಬ್ಬಂದಿ ಹಾಗೂ ಪ್ರಯೋಗಾಲಯ ಉಪಕರಣಗಳ ಲಭ್ಯತೆಗಳ ಷರತ್ತನ್ನು ವಿಧಿಸಿದೆ. ಈ ನಿಟ್ಟಿನಲ್ಲಿ ಸದರಿ ಕಾಲೇಜಿನಲ್ಲಿ ಶೈಕ್ಷಣಿಕ ಚಟುವಟಿಕೆಗಳನ್ನು ಪ್ರಾರಂಭಿಸಲು ಅಗತ್ಯವಿರುವ ಒಟ್ಟು 106 (ಬೋಧಕ-42, ಬೋಧಕೇತರ-64) ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು ಅನುಮತಿ ಕೋರಿ ವಿಶ್ವವಿದ್ಯಾಲಯದಿಂದ ಸಲ್ಲಿಕೆಯಾಗಿರುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿರುತ್ತದೆ. ತದನಂತರ ಭಾರತೀಯ ಪಶುವೈದ್ಯಕೀಯ ಪರಿಷತ್ತಿನ ಅನುಮತಿ ದೊರೆತ ಕೂಡಲೇ ಮಹಾವಿದ್ಯಾಲಯವನ್ನು ಪ್ರಾರಂಭಿಸಲಾಗುವುದು. |
| ಇ) | ಸದರಿ ಕಾಲೇಜಿಗೆ ಬೇಕಾಗಿರುವ ಎಲ್ಲಾ ಮೂಲಭೂತ ಸೌಕರ್ಯಗಳನ್ನು ಈಗಾಗಲೇ ಕಲ್ಪಿಸಲಾಗಿದೆಯೇ; (ವಿವರ ನೀಡುವುದು) | ಪ್ರಸ್ತುತ ಸದರಿ ಕಾಲೇಜಿನ ಮೊದಲನೆ ಹಂತದ ಕಾಮಗಾರಿಗಳು ಪೂರ್ಣಗೊಂಡಿದ್ದು ಎರಡನೇ ಹಂತದ ಕಾಮಗಾರಿಗಳಿಗೆ ಪ್ರಸ್ತಾವನೆಯು ಸಲ್ಲಿಕೆಯಾಗಿರುವುದಿಲ್ಲ. ಎರಡನೇ ಹಂತದ ಕಾಮಗಾರಿಗಳು ಪೂರ್ಣಗೊಂಡ ನಂತರ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲು ಅಗತ್ಯ ಕ್ರಮವಹಿಸಲಾಗುತ್ತದೆ. |

| | | |
|---|---|---|
| ಈ) | ದೇಶೀಯ ಗೋ ತಳಿಗಳ ಅಭಿವೃದ್ಧಿಗೆ ಸ್ಥಳೀಯವಾಗಿ ಯಾವ ಯಾವ ಜಿಲ್ಲೆಗಳಲ್ಲಿ ತಳಿ ಸಂವರ್ಧನಾ ಕೇಂದ್ರಗಳನ್ನು ತೆರೆಯಲಾಗಿದೆ ಹಾಗೂ ಸದರಿ ಕೇಂದ್ರಗಳಲ್ಲಿ ಕೈಗೊಂಡಿರುವ ಕಾರ್ಯಕ್ರಮಗಳ ವಿವರಗಳೇನು? | ದೇಶೀಯ ಗೋ ತಳಿಗಳ ಅಭಿವೃದ್ಧಿಗೆ ತೆರೆಯಲಾದ ತಳಿ ಸಂವರ್ಧನಾ ಕೇಂದ್ರಗಳ ಮತ್ತು ಕಾರ್ಯಕ್ರಮಗಳ ವಿವರಗಳನ್ನು **ಅನುಬಂಧದಲ್ಲಿ** ನೀಡಲಾಗಿದೆ. |

**ಸಂ: ಪಸಂಮೀ ಇ-351 ಪಅಸೇ 2022**

(ಪ್ರಭು ಬಿ. ಚವ್ಹಾಣ್)
**ಪಶುಸಂಗೋಪನೆ ಸಚಿವರು**

**ಶ್ರೀ ಪ್ರತಾಪ್ ಸಿಂಹ ನಾಯಕ್ ಕೆ (ವಿಧಾನ ಸಭೆಯಿಂದ ಚುನಾಯಿತರಾದವರು) ರವರ ಚುಕ್ಕೆ ರಹಿತ ಪ್ರಶ್ನೆ ಸಂ. 877 (1048)ಕ್ಕೆ ಅನುಬಂಧ**

| ಕ್ರ. ಸಂ. | ಜಿಲ್ಲೆ | ತಳಿ | ಕ್ಷೇತ್ರದ ಹೆಸರು | ಕೈಗೊಂಡಿರುವ ಕಾರ್ಯಕ್ರಮಗಳು |
|---|---|---|---|---|
| 1 | ಚಿಕ್ಕಮಗಳೂರು | ಅಮೃತ್ ಮಹಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಅಜ್ಜಂಪುರ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿಳುವಾಲ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬೀರೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಾಸೂರು.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಲಿಂಗದಹಳ್ಳಿ. | 1. ಅಮೃತ್ ಮಹಲ್‌ನ ಐತಿಹಾಸಿಕ ಜಾನುವಾರು ತಳಿಯನ್ನು ಸಂರಕ್ಷಿಸಿ ಸಂವರ್ಧನೆ ಮಾಡಲಾಗುತ್ತಿದೆ.<br><br>2.ಅಮೃತ್ ಮಹಲ್ ಜಾನುವಾರು ತಳಿಯ ಶುದ್ಧತೆಯನ್ನು ಕಾಪಾಡಿ ಕೊಳ್ಳಲಾಗುತ್ತಿದೆ.<br><br>3. ಹರಾಜಿನ ಮೂಲಕ ರೈತರಿಗೆ ಶುದ್ಧ ಅಮೃತ್ ಮಹಲ್ ಹೋರಿ ಕರುಗಳನ್ನು ಒದಗಿಸುವುದು ಮತ್ತು ಘನೀಕೃತ ವೀರ್ಯ ಉತ್ಪಾದನಾ ಮತ್ತು ಸಂಸ್ಕರಣಾ ಕೇಂದ್ರಗಳಿಗೆ ಉತ್ಕೃಷ್ಟ ಅಮೃತ್ ಮಹಲ್ ಹೋರಿ ಕರುಗಳನ್ನು ಉತ್ಪಾದಿಸಿ ನೀಡಲಾಗುತ್ತಿದೆ.<br><br>4. ಅಮೃತಮಹಲ್ ಕಾವಲುಗಳನ್ನು ಸಂರಕ್ಷಣೆ ಮಾಡಲಾಗುತ್ತಿದೆ. |
| 2 | ಚಿತ್ರದುರ್ಗ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಮಗಿರಿ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಚಿಕ್ಕ ಎಮ್ಮಿಗನೂರು<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಕೈನೋಡು. | |
| 3 | ಹಾಸನ | | ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಹಬ್ಬನಘಟ್ಟ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ಬಿದರ.<br>ಅಮೃತ್ ಮಹಲ್ ತಳಿ ಸಂವರ್ಧನಾ ಉಪಕೇಂದ್ರ, ರಾಯಸಂದ್ರ. | |
| 4 | ತುಮಕೂರು | ಹಳ್ಳಿಕಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುಣಿಕೇನಹಳ್ಳಿ ಹಾಗೂ ಹುಲ್ಲೇನಹಳ್ಳಿ | ಹಳ್ಳಿಕಾರ್ ತಳಿ ಸಂವರ್ಧನೆ ಮತ್ತು ಸಂರಕ್ಷಣೆ ಮಾಡಲಾಗುತ್ತಿದೆ. ಉತ್ಕೃಷ್ಟ ಹೋರಿಕರಗಳನ್ನು ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |

| | | | | |
|---|---|---|---|---|
| 5 | ಹಾವೇರಿ | ಖಿಲಾರ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಬಂಕಾಪುರ. | ಖಿಲಾರ್ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ಮೇವು ಅಭಿವೃದ್ಧಿ ಪಡಿಸಿ ರೈತರಿಗೆ ಮೇವು ಬೆಳೆ ಬೇರುಗಳನ್ನು ನೀಡಲಾಗುತ್ತಿದೆ. ಪಶುಪಾಲನಾ ಚಟುವಟಿಕೆಗಳ ಕುರಿತು ರೈತರಿಗೆ ತರಬೇತಿ ಕಾರ್ಯಕ್ರಮಗಳನ್ನು ಆಯೋಜಿಸಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |
| 6 | ದಕ್ಷಿಣ ಕನ್ನಡ | ಮಲೆನಾಡುಗಿಡ್ಡ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೊಯ್ಲಾ. | ಮಲೆನಾಡು ಗಿಡ್ಡ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |
| 7 | ಬಳ್ಳಾರಿ | ದೇವಣಿ<br>ಓಂಗೋಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕುರಿಕುಪ್ಪೆ. | ಇತರೆ ರಾಜ್ಯಗಳ ದೇಸೀ ತಳಿಗಳಾದ ದೇವಣಿ, ಗಿರ್, ಸಾಹಿವಾಲ್, ಓಂಗೋಲ್ ತಳಿಗಳನ್ನು ರಾಜ್ಯದ ರೈತರಿಗೆ ಪರಿಚಯಿಸಲು ಇಲಾಖಾ ಕ್ಷೇತ್ರಗಳಲ್ಲಿ ನಿರ್ವಹಿಸಲಾಗುತ್ತಿದೆ. 2021-22ನೇ ಸಾಲಿನಲ್ಲಿ ಗೋ ಸಂಕುಲ ಸಂಮೃದ್ಧಿ ಯೋಜನೆ ಅಡಿಯಲ್ಲಿ ಆರಂಭಿಸಲಾಗಿದ. |
| 8 | ಚಾಮರಾಜನಗರ | ಗಿರ್ | ಕಡಸು ಉತ್ಪಾದನಾ ಮತ್ತು ತರಬೇತಿ ಕೇಂದ್ರ, ಬರಗಿ. | |
| 9 | ಕೊಡಗು | ಸಾಹಿವಾಲ್ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ಕೂಡಿಗೆ. | |
| 10 | ಧಾರವಾಡ | ಕೃಷ್ಣಾವ್ಯಾಲಿ | ಜಾನುವಾರು ಸಂವರ್ಧನಾ ಮತ್ತು ತರಬೇತಿ ಕೇಂದ್ರ, ತೇಗೂರು. | ಕೃಷ್ಣಾವ್ಯಾಲಿ ತಳಿ ಸಂರಕ್ಷಣೆ ಮತ್ತು ಸಂವರ್ಧನೆ ಮಾಡಲಾಗುತ್ತಿದೆ. ವೀರ್ಯ ಉತ್ಪಾದನೆಗೆ ಅಗತ್ಯವಿರುವ ಉತ್ತಮ ಹೋರಿಗಳ ಉತ್ಪಾದಿಸಿ ಘನೀಕೃತ ವೀರ್ಯ ಉತ್ಪಾದನಾ ಕೇಂದ್ರಗಳಿಗೆ ಒದಗಿಸಲಾಗುತ್ತಿದೆ. |

ನಿರ್ದೇಶಕರು